ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ದಕ್ಷಿಣ ಕನ್ನಡ, ಮಂಗಳೂರು

# Spl. Case No.134/2019

ಸರಕಾರದ ಪರವಾಗಿ,
ತಹಶೀಲ್ದಾರರು, ಬಂಟ್ವಾಳ ತಾಲೂಕು - ಪಿರ್ಯಾದುದಾರ

ಮತ್ತು

ರವೀಂದ್ರ ಬಿ.ಸಿ. ಮತ್ತು ಇನ್ನೊಬ್ಬರು - ಆರೋಪಿಗಳು

ದೋಷಾರೋಪಣೆ

ನಾನು ರವೀಂದ್ರ ಎಂ. ಜೋಶಿ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದ.ಕ., ಮಂಗಳೂರು ಆದ ನಾನು ನಿನ್ನನ್ನು (ಆರೋಪಿ) -

1. ರವೀಂದ್ರ ಬಿ.ಸಿ.,
   ತಂದೆಃ ತಿಮ್ಮಣ್ಣ,
   ವಾಸಃ ಮಾವಿನಕಟ್ಟೆ, ಮಣಿನಾಲ್ಕೂರು ಗ್ರಾಮ,
   ಬಂಟ್ವಾಳ ತಾಲೂಕು.
2. ಹಾರಿಸ್,
   C/o ರವೀಂದ್ರ ಬಿ.ಸಿ.,
   ವಾಸಃ ಮಾವಿನಕಟ್ಟೆ, ಮಣಿನಾಲ್ಕೂರು ಗ್ರಾಮ,
   ಬಂಟ್ವಾಳ ತಾಲೂಕು.

ಈ ಕೆಳಕಂಡಂತೆ ದೋಷಾರೋಪಣೆಗೆ ಒಳಪಡಿಸುತ್ತಿದ್ದೇನೆ.

ದಿನಾಂಕ 13.09.2016 ರಂದು ನೀವು (ಆರೋಪಿ 1, 2) ಸರಪಾಡಿ ಮತ್ತು ಮಣಿನಾಲ್ಕೂರು ಗ್ರಾಮ ವ್ಯಾಪ್ತಿಯಲ್ಲಿ ಹರಿಯುವ ನೇತ್ರಾವತಿ ನದಿಯಿಂದ ಅಕ್ರಮವಾಗಿ ಮರಳಿನ ಗಣಿಗಾರಿಕೆ ನಡೆಸಿ, ರವೀಂದ್ರ ಟಿ.ಸಿ. (ಆರೋಪಿ 1) ನಿನ್ನ ಜಮೀನು ಸರ್ವೆ ನಂ.166/1 ಇದರಲ್ಲಿ ಸಂಗ್ರಹಿಸಿ ಸುಮಾರು 1,500 ಮೆಟ್ರಿಕ್ ಟನ್‌ನಷ್ಟು ಮರಳನ್ನು ಕಳ್ಳತನದಿಂದ ಮಾರಾಟ ಮಾಡಿದ್ದು, ಈ ಕುರಿತು ಮಾಹಿತಿ ಆಧರಿಸಿ ದಿನಾಂಕ 13.09.2016 ರಂದು ತಾಲೂಕಾ ಮರಳು ಉಸ್ತುವಾರಿ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ತಹಶೀಲ್ದಾರ್ ಆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಅಲ್ಲಿ ಸಂಗ್ರಹಿಸಲಾಗಿದ್ದ

ಮರಳನ್ನು ವಶಕ್ಕೆ ಪಡೆದಿದ್ದು, ನೀವು ಸರ್ಕಾರಕ್ಕೆ ರಾಜಧನ ನೀಡದೇ ಅಕ್ರಮವಾಗಿ ಮರಳು ಗಣಿಗಾರಿಕೆ ನಡೆಸಿ, ಕಲಂ 4(1), 4(1)ಎ MMDR ಕಾಯ್ದೆ ಮತ್ತು KMMC ನಿಯಮ 3(1), 42(1), 43(2)ಗಳನ್ನು ಉಲ್ಲಂಘಿಸಿ, ಕಲಂ 21 MMDR ಕಾಯ್ದೆ ಹಾಗೂ ನಿಯಮ 44 KMMC ನಿಯಮಗಳ ಹಾಗೂ ಕಲಂ 379 ರ ಭಾ.ದಂ.ಸಂ. ಅಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಮೇಲಿನ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಬರುವುದರಿಂದ ನಿಮ್ಮನ್ನು ಈ ಕುರಿತು ವಿಚಾರಣೆಗೆ ಒಳಪಡಿಸಲು ಆದೇಶಿಸುತ್ತೇನೆ.

ದಿನಾಂಕ 13 ನೇ ದಿವಸ ಆಗಸ್ಟ್ ತಿಂಗಳ 2024 ನೇ ಇಸವಿ.

**(ರವೀಂದ್ರ ಎಂ. ಜೋಶಿ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ದಕ್ಷಿಣ ಕನ್ನಡ, ಮಂಗಳೂರು

## Spl. Case No.134/2019

| | | |
|---|---|---|
| ಆರೋಪಿಯ ಹೆಸರು | - | ರವೀಂದ್ರ ಬಿ.ಸಿ. (ಎ 1) |
| ತಂದೆಯ ಹೆಸರು | - | ತಿಮ್ಮಣ್ಣ, |
| ಪ್ರಾಯ | - | ವರ್ಷ, |
| ವಾಸಸ್ಥಾನ | - | ಮಾವಿನಕಟ್ಟೆ, ಮಣಿನಾಲ್ಕೂರು ಗ್ರಾಮ, ಬಂಟ್ವಾಳ ತಾಲೂಕು. |

### ಆರೋಪಿಯ ಹೇಳಿಕೆ

ಪ್ರ.ನಂಬ್ರ 1 - ಈಗ ಓದಿ ಹೇಳಿದ ಆಪಾದನೆ ಅರ್ಥ ಆಯಿತೇ?

ಉತ್ತರ -

ಪ್ರ.ನಂಬ್ರ 2 - ಈ ಆಪಾದನೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆ ಆಗ ಬೇಕೇ?

ಉತ್ತರ -

ಆರೋಪಿಗೆ ದೋಷಾರೋಪಣೆಯನ್ನು ಅವನಿಗೆ ಅರ್ಥ ಆಗುವ ಭಾಷೆಯಲ್ಲಿ ಓದಿ ಹೇಳಿ, ವಿವರಿಸಿ, ಆರೋಪಿಯು ನೀಡಿದ ಉತ್ತರವನ್ನು ನಾನು ಸರಿಯಾಗಿ ಕೇಳಿ ಬರೆದಿರುತ್ತೇನೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ 13 ನೇ ದಿವಸ ಆಗಸ್ಟ್ ತಿಂಗಳ 2024 ನೇ ಇಸವಿ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ದಕ್ಷಿಣ ಕನ್ನಡ, ಮಂಗಳೂರು

## Spl. Case No.134/2019

ಆರೋಪಿಯ ಹೆಸರು - ಹಾರಿಸ್ (ಎ 2)

ತಂದೆಯ ಹೆಸರು -

ಪ್ರಾಯ - ವರ್ಷ,

ವಾಸಸ್ಥಾನ - C/o ರವೀಂದ್ರ ಬಿ.ಸಿ., ಮಾವಿನಕಟ್ಟೆ, ಮಣಿನಾಲ್ಕೂರು ಗ್ರಾಮ, ಬಂಟ್ವಾಳ ತಾಲೂಕು.

### ಆರೋಪಿಯ ಹೇಳಿಕೆ

ಪ್ರ.ನಂಬ್ರ 1 - ಈಗ ಓದಿ ಹೇಳಿದ ಆಪಾದನೆ ಅರ್ಥ ಆಯಿತೇ?

ಉತ್ತರ -

ಪ್ರ.ನಂಬ್ರ 2 - ಈ ಆಪಾದನೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆ ಆಗ ಬೇಕೇ?

ಉತ್ತರ -

ಆರೋಪಿಗೆ ದೋಷಾರೋಪಣೆಯನ್ನು ಅವನಿಗೆ ಅರ್ಥ ಆಗುವ ಭಾಷೆಯಲ್ಲಿ ಓದಿ ಹೇಳಿ, ವಿವರಿಸಿ, ಆರೋಪಿಯು ನೀಡಿದ ಉತ್ತರವನ್ನು ನಾನು ಸರಿಯಾಗಿ ಕೇಳಿ ಬರೆದಿರುತ್ತೇನೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ 13 ನೇ ದಿವಸ ಆಗಸ್ಟ್ ತಿಂಗಳ 2024 ನೇ ಇಸವಿ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.